ಆಯುಕ್ತರ ಕಾರ್ಯಾಲಯ
ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ
ಮಿನಿ ವಿಧಾನ ಸೌಧ ಹತ್ತಿರ,
ಚಿತ್ತಾಪೂರ ರಸ್ತೆ ಯಾದಗಿರಿ-585202

ಕರ್ನಾಟಕ ಸರಕಾರ

# ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ, ಯಾದಗಿರಿ

ಆಯುಕ್ತರ ಕಾರ್ಯಾಲಯ, ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ, ಮಿನಿ ವಿಧಾನ ಸೌಧ ಹತ್ತಿರ, ಚಿತ್ತಾಪೂರ ರಸ್ತೆ ಯಾದಗಿರಿ-585202
Email: yudayadgir@gmail.com ದೂರವಾಣಿ ಸಂಖ್ಯೆ: 08473-253316

ಸಂ:ನಪ್ರಾಯಾ/ಅ.ವಿ.ಅ/ /2024-25/ 714-716 ದಿನಾಂಕ:-5 -02-2025

## 'ಅಂತಿಮ ಅನುಮೋದನೆ ಆದೇಶ'

ವಿಷಯ:- ಯಾದಗಿರಿ ಜಿಲ್ಲೆ ಯಾದಗಿರಿ ತಾಲೂಕ ಯಾದಗಿರಿ 'ಬಿ' ಗ್ರಾಮದ ಸ.ನಂ.592/*/6 ಕ್ಷೇತ್ರ: 01ಎ-35ಗುಂಟೆ ಜಮೀನಿಗೆ ವಸತಿ ಉದ್ದೇಶದ ಅಂತಿಮ ವಿನ್ಯಾಸ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:- 1) ಅರ್ಜಿದಾರರ ಮನವಿ ಪತ್ರ ದಿನಾಂಕ:- 24-01-2025
2) ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ, ಇವರ ಬಿನ್‌ಶೇತ್ಕಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: 492473 ದಿನಾಂಕ:-17-08-2023.
3) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ದಿನಾಂಕ:-_04-02-2025
4) ಪ್ರಾಧಿಕಾರದ ತಾತ್ಕಾಲಿಕ ಅನುಮೋದನೆ ಪತ್ರ ದಿನಾಂಕ:-ನ.ಪ್ರಾ.ಯಾ/ವ.ವಿ/ಕಸಂ:57/2024-25
5) ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ಇವರ ಪತ್ರ ಸಂಖ್ಯೆ:KWB/EEK/TEC/JE/YDG/private layout/2024-25/2734 ದಿನಾಂಕ:-10-01-2025
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಜೆಸ್ಕಾಂ, ಯಾದಗಿರಿ, ಇವರ ಕಚೇರಿ ಪತ್ರದ NO:AEE/AE (T)/YDG/2024-25/3477 ದಿನಾಂಕ:-30-01-2025
7) ಪೌರಾಯುಕ್ತರು, ನಗರಸಭೆ, ಯಾದಗಿರಿ, ಇವರ ಪತ್ರ ಸಂಖ್ಯೆ:ನಸಯಾ:ವಿನ್ಯಾಸ ಶಾಖೆ:2024-25/791 ದಿನಾಂಕ:-22-01-2025.
8)ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯ ಠರಾವು ಸಂಖ್ಯೆ:-32, ದಿನಾಂಕ:-28-01-2025.
9) ಅರ್ಜಿದಾರರು ಸಾರ್ವಜನಿಕ ಜಾಗೆಯನ್ನು ಈ ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ದಿ:24-04-2024
10) ಕರ್ನಾಟಕ ರಾಜ್ಯ ಪತ್ರದ ಅಧಿಸೂಚನೆ ಸಂಖ್ಯೆ: ವೈಶಾಅ/24/ಸಾಶನ/2015 ಬೆಂಗಳೂರು ದಿನಾಂಕ: 10-09-2015

*******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಪತ್ರದಲ್ಲಿ ಅರ್ಜಿದಾರರು ಯಾದಗಿರಿ ಜಿಲ್ಲೆ ಯಾದಗಿರಿ ತಾಲೂಕ ಯಾದಗಿರಿ 'ಬಿ' ಗ್ರಾಮದ ಸ.ನಂ.592/*/6 ಕ್ಷೇತ್ರ: 01ಎ-35ಗುಂಟೆ ಜಮೀನಿನ ವಸತಿ ಉದ್ದೇಶದ ವಿನ್ಯಾಸದಲ್ಲಿನ ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪ್ರಶ್ನಿತ ಜಮೀನು ಯಾದಗಿರಿ ಮಹಾಯೋಜನೆಯಲ್ಲಿ ವಸತಿ ವಲಯದಲ್ಲಿ ಕಾಯ್ದಿರಿಸಲಾಗಿದೆ ಹಾಗೂ ಹಾಲಿ 9.00ಮೀ. ಅಗಲದ ರಸ್ತೆ ಸಂಪರ್ಕ ಹೊಂದಿರುತ್ತದೆ. ಉಲ್ಲೇಖ (2) ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ, ಇವರು, ಸದರಿ ಜಮೀನಿಗೆ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆದೇಶ ಹೊರಡಿಸಿರುತ್ತಾರೆ.

ಅದರಂತೆ ವಿನ್ಯಾಸದ ಮಾಲೀಕರು ಕಾಯ್ದೆಯ ಅವಕಾಶದಂತೆ ಉಲ್ಲೇಖ (3) ರಲ್ಲಿ ಅಗತ್ಯ ಶುಲ್ಕ ಪಾವತಿಸಿರುತ್ತಾರೆ. ಉಲ್ಲೇಖ (4) ರಲ್ಲಿ ಪ್ರಾಧಿಕಾರದಿಂದ ತಾತ್ಕಾಲಿಕ ವಸತಿ ವಿನ್ಯಾಸಕ್ಕೆ ಅನುಮೋದನೆ ನೀಡಲಾಗಿರುತ್ತದೆ.

ಉಲ್ಲೇಖ (5)ರಲ್ಲಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ಇವರು ಸದರಿ ವಿನ್ಯಾಸದಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ದೃಡೀಕರಣ ಪತ್ರ ನೀಡಿರುತ್ತಾರೆ.

ಉಲ್ಲೇಖ (6)ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜೆಸ್ಕಾಂ, ಯಾದಗಿರಿ, ಇವರು ವಿದ್ಯುತ್ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ದೃಡೀಕರಣ ಪತ್ರ ನೀಡಿರುತ್ತಾರೆ. ಉಲ್ಲೇಖ (7) ರಲ್ಲಿ ಪೌರಾಯುಕ್ತರು, ನಗರಸಭೆ, ಯಾದಗಿರಿ, ಇವರು ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ ಎಂದು ಪತ್ರ ನೀಡಿರುತ್ತಾರೆ.

ಉಲ್ಲೇಖ(8) ರನ್ವಯ ಪ್ರಾಧಿಕಾರದ ಸಭೆಯ ನಿರ್ಣಯದಂತೆ ವಿನ್ಯಾಸದಲ್ಲಿ ಬರುವ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ನಿವೇಶನಗಳನ್ನು ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿರುತ್ತದೆ, ಉಲ್ಲೇಖ(9) ರನ್ವಯ ಅರ್ಜಿದಾರರು ಸದರಿ ಸಾರ್ವಜನಿಕ ಉಪಯೋಗದ ಜಾಗೆಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿರುತ್ತಾರೆ.

ಮಟ-2ಕ್ಕೆ-

ಉಲ್ಲೇಖ(10)ರನ್ವಯ ಈ ಕೆಳಗಿನ ನಿಬಂಧನೆಗೋಳಪಟ್ಟು ಕೆ.ಟಿ.ಸಿ.ಪಿ ಕಾಯ್ದೆ 1961 ಕಲಂ 17(2) ರನ್ವಯ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ವಿನ್ಯಾಸದಲ್ಲಿನ ನಿವೇಶನ ಸಂಖ್ಯೆ:01 ರಿಂದ 33ರ ವರೆಗಿನ ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.

ನಿಬಂಧನೆಗಳು:


1) ಮಂಜೂರಾತಿ ನೀಡಿರುವ ಉದ್ದೇಶಕ್ಕೆ ಕಟ್ಟುನಿಟ್ಟಾಗಿ ಬಳಸತಕ್ಕದ್ದು, ವಿನ್ಯಾಸವನ್ನು ಯಾವುದೇ ರೀತಿ ಬದಲಾವಣೆ ಮಾಡಬಾರದು.
2) ನಿವೇಶನದ ಅಳತೆ ರಸ್ತೆಯ ಅಗಲ ಮತ್ತು ಅಲೈನಮೆಂಟ (ಮಾರ್ಗ) ಉದ್ಯಾನವನ, ಬಯಲು ಜಾಗ ಮತ್ತು ಸಾರ್ವಜನಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಾಗೆಯನ್ನು ಅಳತೆಯಲ್ಲಾಗಲಿ, ಸ್ಥಾನದಲ್ಲಾಗಲಿ, ಯಾವುದೇ ಕಾರಣಕ್ಕೂ ಬದಲಾವಣೆ ಮಾಡಬಾರದು.
3) ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಮಹಾಯೋಜನೆಗೆ ಅನುಗುಣವಾಗಿ ಯೋಜನಾ ನಿಯಮಾವಳಿಗಳಂತೆ ನಕ್ಷೆಗೆ ಅನುಮೋದನೆ ನೀಡಿದೆ.
4) ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಈ ವಿನ್ಯಾಸದ ಮಂಜೂರಾತಿಯನ್ನು ರದ್ದುಗೊಳಿಸಲಾಗುವುದು ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ನಿಯಮ 17(4) ಮತ್ತು 73 ರಂತೆ ಕ್ರಮ ತೆಗೆದುಕೊಳ್ಳಲಾಗುವುದು.
5) ಸಿವಿಲ್ ವ್ಯಾಜ್ಯಗಳಿಗೆ ಹಾಗೂ ಚೆಕ್ ಬಂದಿಗಳಿಗೆ ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
6) ವಿನ್ಯಾಸದಲ್ಲಿನ ನಿವೇಶನಗಳಿಗೆ ಸಕ್ಷಮ ಪ್ರಾಧಿಕಾರದ ಪ್ರಾಮಾಣಿಕ ಪ್ರಮಾಣ ಪತ್ರ ಹಾಗೂ ಕಟ್ಟಡ ಪರವಾನಿಗೆ ಪಡೆದ ನಂತರವೇ ಕಟ್ಟಡ ಕಟ್ಟತಕ್ಕದ್ದು.
7) ವಿನ್ಯಾಸದ ಪ್ರದೇಶದಲ್ಲಿ ಬರುವ ಹೆಚ್.ಟಿ./ಎಲ್.ಟಿ ಲೈನ್‌ಗಳನ್ನು ಪ್ರಸ್ತಾವಿತ ರಸ್ತೆಗನುಗುಣವಾಗಿ ಸ್ಥಳಾಂತರಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಸದರಿ ಲೈನಗಳನ್ನು ಸ್ಥಳಾಂತರಿಸದೇ ಇದ್ದಲ್ಲಿ ಅದರ ಕೆಳಗೆ ರಚಿಸಿರುವ ನಿವೇಶನಗಳನ್ನು ರದ್ದಾಗಿವೆ ಎಂದು ಭಾವಿಸತಕ್ಕದ್ದು.
8) ಬಯಲು ಜಾಗೆ ಮತ್ತು ರಸ್ತೆ ಬದಿಯಲ್ಲಿ ಸಸಿಗಳನ್ನು ಬೆಳೆಸಬೇಕು.
9) ಅನುಮೋದಿತ ವಿನ್ಯಾಸದಲ್ಲಿ ಕೊಳವೆ ಬಾವಿಯನ್ನು ತೆರೆಯುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು ಹಾಗೂ ತೆರೆದ ಬಾವಿಯ ಬಗ್ಗೆ ಮಾಲೀಕರುಗಳು ಮತ್ತು ಸಂಬಂಧಪಟ್ಟ ಸ್ಥಳಿಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:31-12-2012 ಮತ್ತು ದಿನಾಂಕ: 06-08-2014ರಂದು ನೀಡಿರುವ ನಿರ್ದೇಶನದಂತೆ ತಪ್ಪದೆ ಕ್ರಮವಹಿಸತಕ್ಕದ್ದು.
10) ಅರ್ಜಿದಾರರು ಜಮೀನಿನ ಒಡೆತನದ ಯಾವುದೇ ಮಾಹಿತಿ/ದಾಖಲೆಗಳು ತಪ್ಪಾಗಿದ್ದಲ್ಲಿ/ ಫೋರ್ಜರಿಯಾಗಿದ್ದಲ್ಲಿ ಹಾಗೂ ಯಾವುದೇ ತಂಟೆ/
11) ತಕರಾರುಗಳು ಬಂದಲ್ಲಿ ಅಂತಿಮ ವಿನ್ಯಾಸವು ಸ್ವಯಂ ಚಾಲಿತವಾಗಿ ರದ್ದಾಗುತ್ತವೆ.
12) ಸದರಿ ಬಡಾವಣೆಯಲ್ಲಿ ಸುತ್ತಲೂ ಕಾಂಪೌಂಡ ನಿರ್ಮಿಸಿ, ಗೇಟನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೆದಿಸಲಾಗಿದೆ. ಹಾಗೂ ಸದರಿ ಬಡಾವಣೆಯಲ್ಲಿನ ರಸ್ತೆ, ಆಟದ ಮೈದಾನ/ ಉದ್ಯಾನವನ/ಬಯಲು ಜಾಗೆಗಳನ್ನು ನಿಷೇದಿಸಲಾಗಿದೆ, ಹಾಗೂ ಸದರಿ ಬಡಾವಣೆಯಲ್ಲಿನ ಸಾರ್ವಜನಿಕ ಸ್ವತ್ತುಗಳನ್ನು ಮುಕ್ತವಾಗಿಡತಕ್ಕದ್ದು.
13) ನಿವೇಶನಗಳನ್ನು ಬಿಡುಗಡೆ ಮಾಡುವ ಮುನ್ನ ರೇರಾ ಪ್ರಾಧಿಕಾದಲ್ಲಿ ನೊಂದಣಿಯಾಗಿದೆ ಎಂಬ ಬಗ್ಗೆ ಖಾತ್ರಿ ಪಡಿಸಿಕೊಂಡು ನಂತರವೇ ನಿವೇಶನಗಳನ್ನು ಬಿಡುಗಡೆ ಮಾಡತಕ್ಕದ್ದು


ಆಯುಕ್ತರು,
ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ,
ಯಾದಗಿರಿ.

ಪ್ರತಿಯನ್ನು:-

1) ಶ್ರೀಮತಿ ಲಕ್ಷ್ಮೀಬಾಯಿ ಗಂಡ ಶಂಕರ ರಾಠೋಡ ಸಾ|| ಯಾದಗಿರಿ ರವರ ಮಾಹಿತಿಗಾಗಿ.
2) ಪೌರಾಯುಕ್ತರು, ನಗರಸಭೆ, ಯಾದಗಿರಿ., ಮೂರು ಪ್ರತಿಗಳೊಂದಿಗೆ (3)ಇವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
3) ಉಪನೋಂದಣಾಧಿಕಾರಿಗಳು, ಯಾದಗಿರಿ, ರವರ ಮಾಹಿತಿಗಾಗಿ.
4) ಕಚೇರಿ ಪ್ರತಿ.

ಆಯುಕ್ತರು,
ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ,
ಯಾದಗಿರಿ.




-:ಭೂ ಉಪಯೋಗ ವಿಶ್ಲೇಷಣೆ:-

| ಭೂ ಉಪಯೋಗ | ವಿಸ್ತೀರ್ಣ.ಚ.ಮೀ | ಶೇಕಡಾವಾರು |
|---|---|---|
| ವಸತಿಗಾಗಿ. | 3791.76 | 49.97% |
| ಉದ್ಯಾನವನ. | 762.43 | 10.04% |
| ಸಾರ್ವಜನಿಕ ಉಪಯೋಗ | 381.12 | 05.02% |
| ರಸ್ತೆಗಾಗಿ. | 2652.51 | 34.97% |
| ಒಟ್ಟು= | 7587.82 | 100.00% |

-:ನಿವೇಶನಗಳ ವಿವರಗಳು:-

| ನಿವೇಶನದ ಅಳತೆ | ಸಂಖ್ಯೆ |
|---|---|
| 9.0ಮೀx12.0ಮೀ | 20 |
| 9.0ಮೀx15.0ಮೀ | 01 |
| ಅನಿಯತ (O) | 12 |
| ಒಟ್ಟು= | 33 |

" ಪ್ರಾಧಿಕಾರದ ನಿರ್ಣಯ ಸಂಖ್ಯೆ: 32
ದಿನಾಂಕ: 18/01/2025 ರಂದು ಈ ವಿನ್ಯಾಸವನ್ನು
ಅನುಮೋದಿಸಲಾಯಿತು."

ಪ್ರಸ್ತಾವಿತ ವಿನ್ಯಾಸದ ಕ್ಷೇತ್ರ:- 1 ಎಕರೆ - 35 ಗುಂಟೆ.

ಉ

# ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ ಯಾದಗಿರಿ

ನಗರ ಯೋಜನಾ ಸದಸ್ಯರು
ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ
ಯಾದಗಿರಿ

ಆಯುಕ್ತರು
ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರ
ಯಾದಗಿರಿ

| ತಯಾರಿಸಿದವರು:- | | ದಿನಾಂಕ:- - |
|---|---|---|
| ರೇಖಾ ಶೀರ್ಷಿಕೆ. | ಯಾದಗಿರಿ ತಾಲೂಕಿನ ಯಾದಗಿರಿ"ಬಿ" ಗ್ರಾಮದ ಸ.ನಂ:-592/6ರಲ್ಲಿ ಒಟ್ಟು ಕ್ಷೇತ್ರ 1ಎಕರೆ - 35ಗುಂಟೆ ಜಮೀನಿಗೆ ತಯಾರಿಸಿದ ಅಂತಿಮ ವಸತಿ ಉದ್ದೇಶದ ವಿನ್ಯಾಸ ನಕ್ಷೆ. | ಅಳತೆ:-1:1000 |
| | ಅರ್ಜಿದಾರರಾದ:- ಶ್ರೀಮತಿ ಲಕ್ಷ್ಮಿಬಾಯಿ ಗಂಡ ಶಂಕರ ರಾಠೋಡ ಸಾ:- ಯಾದಗಿರಿ | ನಕ್ಷೆಯ ಸಂಖ್ಯೆ:- |

ಈ ಕಚೇರಿಯ ಪತ್ರ ಸಂಖ್ಯೆ: ನಪ್ರಾಯಾ/ಕಸಂ: / 2024-25/714-716 ದಿನಾಂಕ:-5/02/2025
ರಂದು ನಮೂದಿಸಿದ ನಿಬಂಧನೆಗಳೊಂದಿಗೆ ಈ ಅಂತಿಮ ವಸತಿ ವಿನ್ಯಾಸವನ್ನು ಅನುಮೋದಿಸಲಾಗಿದೆ."

"ಮಾನ್ಯ, ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ, ಯಾದಗಿರಿ. ಇವರ ಅಧಿಕೃತ ಜ್ಞಾಪನ
ಅರ್ಜಿ ಸಂಖ್ಯೆ :- 492473 ದಿನಾಂಕ:-17-08-2023"ರಲ್ಲಿ
ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿರುತ್ತಾರೆ."

* ಕಂದಾಯ ಇಲಾಖೆಯು ದೃಢೀಕರಿಸಿರುವ ಸರ್ವೆ ಸ್ಕೇಚ್ ರಿತ್ಯ ವಿನ್ಯಾಸ ನಕ್ಷೆ ತಯಾರಿಸಲಾಗಿದ್ದು,
ಈ ಸ್ಕೇಚ್‌ನಲ್ಲಿ ಯಾವುದೇ ನ್ಯೂನತೆಗಳಿದ್ದಲ್ಲಿ ಈ ಇಲಾಖೆಯು ಜವಬ್ದಾರಿಯಾಗಿರುವುದಿಲ್ಲ.